**<u>ಪ್ರಧಾನ ಜಿಲ್ಲಾ ಮತ್ತು ಸತ್ರ  ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ</u>**

ಸೆಷನ್ಸ್  ಕೇಸ್ ನಂಃ 3/2021      ಪಿ.ಡಬ್ಲ್ಯೂಃ 6

ಸಿ.ಡಬ್ಲ್ಯೂಃ 7

| | |
|---|---|
| ಸಾಕ್ಷಿದಾರರ ಹೆಸರು | ಸಯ್ಯದ್ ಮೊಹಮದ್ ಆಜಾಮ್ |
| ತಂದೆಯ ಹೆಸರು | ಸಯ್ಯದ್ ಆಯುಬ್ |
| ವಯಸ್ಸು | 48 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಿಳಾಸ | ಹೆಜಮಾಡಿ |

ದಿನಾಂಕಃ 27-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ಮುಖ್ಯ ವಿಚಾರಣೆಃ  ಸರಕಾರಿ ಅಭಿಯೋಜಕರಿಂದ</u>**

1) ನಾನು 5 ವರ್ಷಗಳ ಹಿಂದೆ ಹೆಜಮಾಡಿಯ ಕರ್ನಿರೆಯ ಜುಮ್ಮಾ ಮಸೀದಿಯ ಬಳಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆ.  ಆ ಸಮಯದಲ್ಲಿ ನನ್ನ ಮನೆಯ ಪಕ್ಕದಲ್ಲಿ ಆರೋಪಿತರು ಮತ್ತು ಅವರ ಮನೆಯವರು ವಾಸವಾಗಿದ್ದರು. 2 ನೇ ಆರೋಪಿ ಮೃತನ ತಮ್ಮ.  1 ನೇ ಅರೋಪಿ ಮೃತನ ಹೆಂಡತಿ. ಮೃತ ಸದಾಕತ್ ಅನ್ಸಾರಿಗೆ ಮೂರು ಜನ ಮಕ್ಕಳು.  2 ನೇ ಅರೋಪಿ ಮತ್ತು ಆತನ ಅಣ್ಣ ಮನೆ ಕಟ್ಟುವ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ನಾನು ಆಗ ಕಟ್ಟಡ ನಿರ್ಮಾಣದ ಸಹಾಯಕನಾಗಿ ಕೆಲಸ ಮಾಡುತ್ತಿದ್ದೆ. ನಾನು ಸುಮಾರು 2 ತಿಂಗಳುಗಳ ಕಾಲ ಮೃತ ಸದಾಕತ್ ಅನ್ಸಾರಿಯ ಸಹಾಯಕನಾಗಿ ಕೆಲಸ ಮಾಡಿದ್ದೆ.  ಆಗ ಚಾಸಾ-6 ಕಟ್ಟಡದ ಮಾಲೀಕರಾಗಿದ್ದು, ನನಗೂ ಸಹ ಸಂಬಳ ಕೊಟ್ಟಿದ್ದರು.

2) ನಾನು ಚಾಸಾ-6 ಇವರ ಮನೆಯ ಕೆಲಸಕ್ಕೆ ಕೊನೆಯ ಬಾರಿ 5 ವರ್ಷಗಳ ಹಿಂದೆ ಹೋಗಿದ್ದೆ.  ಆದಿನ ನಾನು ನನ್ನ ವಾಹನದಲ್ಲಿ, ಮೃತ ಮತ್ತು 2 ನೇ ಆರೋಪಿ ಅವರ ವಾಹನದಲ್ಲಿ ಹೋಗಿದ್ದರು.ಸಂಜೆ ಮರುಳುವಾಗ ಮೃತನು ನನ್ನನ್ನು ಆತನೊಂದಿಗೆ ಬರುವಂತೆ ಮತ್ತು ನನ್ನ ವಾಹನವನ್ನು 2 ನೇ ಆರೋಪಿಗೆ ಕೊಟ್ಟು ಅವರ ಮನೆಗೆ ಕಳುಹಿಸಿದ್ದ. ನಾನು ಆದಿನ ಮೃತನ ಸ್ಕೂಟರ್ ನೊಂದಿಗೆ ನನ್ನ ಮನೆಗೆ

ಹೋಗಿದ್ದೆ. ಆದಿನ ರಾತ್ರಿ 10.30 ಗಂಟೆಗೆ ಬಂದಿದ್ದ 2 ನೇ ಆರೋಪಿ ನನ್ನ ಬೈಕ್ ನ್ನು ನನಗೆ ಮರಳಿಸಿ, ಅವರ ಸ್ಕೂಟರ್ ನ್ನು ತೆಗೆದುಕೊಂಡು ಹೋಗಿದ್ದ. ಆದಿನ ಬೆಳಗ್ಗಿನ 4.30 ಗಂಟೆಗೆ 2 ನೇ ಆರೋಪಿ ನನಗೆ ಪೋನ್ ಮಾಡಿದ್ದ ಎಂದು ನಂತರ ತಿಳಿದಿತ್ತು. ನಾನು ಮಲಗಿದ್ದರಿಂದ ನನಗೆ ತಿಳಿದಿರಲಿಲ್ಲ. ಬೆಳಗ್ಗಿನ 8.00 ಗಂಟೆಯ ಸಮಯಕ್ಕೆ ಅಕ್ಕಪಕ್ಕದವರು ನನ್ನನ್ನು ಎಬ್ಬಿಸಿ, ಸದಾಕತ್ ಅನ್ಸಾರಿ ತೀರಿದ್ದ ಬಗ್ಗೆ ತಿಳಿಸಿದ್ದರು. ಆಗ ನಾನು ಅವರ ಮನೆಗೆ ಹೋಗಿದ್ದೆ. ಅಲ್ಲಿ ಅಕ್ಕಪಕ್ಕದವರು ಸೇರಿದ್ದರು.ಚಾಸಾ-6 ಸಹ ಅಲ್ಲಿಗೆ ಬಂದಿದ್ದರು.

3) ಸದಾಕತ್ ಅನ್ಸಾರಿ ಹೇಗೆ ತೀರಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಆತನ ಶವವನ್ನು ನೋಡಿಲ್ಲ. ಪೊಲೀಸರು ನನ್ನನ್ನು ಮೃತನೊಂದಿಗೆ ಕೆಲಸಕ್ಕೆ ಹೋಗಿದ್ದ ಬಗ್ಗೆ ವಿಚಾರಿಸಿದ್ದರು. ಸದಾಕತ್ ಅನ್ಸಾರಿ ಹೇಗೆ ತೀರಿದ್ದನು ಎಂದು ನಂತರವೂ ಸಹ ನನಗೆ ತಿಳಿದಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟಿಸವಾಲು: ಸರಕಾರಿ ಅಭಿಯೋಜಕರಿಂದ:**

1) ಆದಿನ ಬೆಳಗ್ಗಿನ 4.30 ಗಂಟೆಗೆ ನನ್ನ ಮನೆಯ ಬಳಿ ಬಂದಿದ್ದ 2 ನೇ ಅರೋಪಿ ಆತನ ಅಣ್ಣ ಸದಾಕತ್ ಅನ್ಸಾರಿ ಅಪಘಾತದಲ್ಲಿ ತೀರಿದ್ದನು ಎಂದು ಹೇಳಿದ್ದನು ಎಂದರೆ ಸರಿಯಲ್ಲ. ಅದಕ್ಕೂ ಮೊದಲು ರಾತ್ರಿ 9.30 ಗಂಟೆಗೆ ಬಂದಿದ್ದ ಪೋನ್ ಗಾಗಿ ಆತನ ಅಣ್ಣ ಹೊರಗೆ ಹೋಗಿದ್ದು, ವಾಪಾಸು ಬಂದಿರಲಿಲ್ಲ ಎಂದು, ಅದಕ್ಕಾಗಿ ಚಾಸಾ-8 ಮತ್ತು 2 ನೇ ಆರೋಪಿ ಹುಡುಕಲು ಹೋಗಿ, ಎಸ್ ಎಸ್ ರಸ್ತೆಯ , ಹೆಜಮಾಡಿಯ ಗುಂಡಿಯಲ್ಲಿರುವ ಒಂದು ತೋಡಿನಲ್ಲಿ ಆತನ ಅಣ್ಣ ಸ್ಕೂಟಿಯೊಂದಿಗೆ ಬಿದ್ದದ್ದು ಕಂಡು, ಆತನನ್ನು ಆಸ್ಪತ್ರೆಯ ಉಪಚಾರಕ್ಕಾಗಿ ಕರೆದುಕೊಂಡು ಹೋದಾಗ, ಮೃತಪಟ್ಟಿರುವುದಾಗಿ ಕಂಡುಬಂದಿದ್ದು, ಶವವನ್ನು ಕೆಎಂಸಿ ಆಸ್ಪತ್ರೆಯಲ್ಲಿ ಇಟ್ಟಿದ್ದನು ಎಂದು ಹೇಳಿದ್ದ ಎಂದರೆ ಸರಿಯಲ್ಲ. ಅದಕ್ಕಾಗಿ ನಾನು ಸಹ ಕೆಎಂಸಿ ಆಸ್ಪತ್ರೆಗೆ ಹೋಗಿ ಅಲ್ಲಿ ಇದ್ದ ಶವವನ್ನು ಅಲ್ಲಿಂದ ದಪನ್ ಗಾಗಿ ಸಾಗಿಸಲು ಸಹಕರಿಸಿದ್ದೆ ಎಂದರೆ ಸರಿಯಲ್ಲ.

2) ನಂತರ ನನಗೆ ಸದಾಕತ್ ಅನ್ಸಾರಿ ಆತನ ಮಗನಿಗೆ ಬುದ್ದಿ ಹೇಳುವ ವಿಚಾರದಲ್ಲಿ ಹಲ್ಲೆ ಮಾಡಿದ್ದು, ಆ ವಿಚಾರವಾಗಿ ಸದಾಕತ್ ಅನ್ಸಾರಿ ಮತ್ತು ಆತನ ಹೆಂಡತಿ 1 ನೇ ಆರೋಪಿಯೊಂದಿಗೆ ಮಾತುಕತೆಯಾಗಿ, ತಂಟೆಯಾಗಿತ್ತು ಎಂದರೆ ಸರಿಯಲ್ಲ. ಆಗ 1 ನೇ ಆರೋಪಿಗೆ ಹಲ್ಲೆ ಮಾಡಲು ಹೋಗಿದ್ದ ಮೃತನನ್ನು ದೂಡಿದಾಗ, ಆತನಿಗೆ ಪೆಟ್ಟಾಗಿ ಆತ ತೀರಿದ್ದ ಎಂದು ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ಆನಂತರ 2 ನೇ ಅರೋಪಿ,1 ನೇ ಅರೋಪಿಯೊಂದಿಗೆ ಶವವನ್ನು ಅವರ ಸ್ಕೂಟರ್ ನಲ್ಲಿ ಎಸ್ ಎಸ್ ರಸ್ತೆಯ ಹೆಜಮಾಡಿಯ ಗುಂಡಿಯಲ್ಲಿರುವ ಒಂದು ತೋಡಿಗೆ ದೂಡಿ, ಅಪಘಾತವಾಗಿ ಬಿದ್ದಿರುವುದಾಗಿ, ಒಂದು ಸುಳ್ಳು ದೂರು ಕೊಟ್ಟಿದ್ದರು ಎಂದು ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ಅದಕ್ಕಾಗಿ ನಾನು ಈಗ ಓದಿದ ಹೇಳಿಕೆಯನ್ನು ತಾರೀಕು 26-05-2020 ರಂದು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು **ನಿಶಾನೆ ಪಿ-7** ಎಂದು ಗುರುತಿಸಿದೆ.

3) ನನಗೆ ಆರೋಪಿತರ ಮನೆಯಲ್ಲಿ ಆಗಿದ್ದ ಘಟನೆಯ ಬಗ್ಗೆ ಮಾಹಿತಿ ಇದ್ದರೂ, ಈಗ ಅವರಿಗೆ ತೊಂದರೆ ಆಗಬಾರದೆಂದು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು: ಶ್ರೀ ಪಿ.ಪಿ.ಜೆ ವಕೀಲರಿಂದ ಆರೋಪಿತರ ಪರವಾಗಿ</u>**

1) ನಾನು ಮೃತ ಸದಾಕತ್ ಅನ್ಸಾರಿಯೊಂದಿಗೆ ಎಂದೂ ಕೆಲಸಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಸದರಿ ಸದಾಕತ್ ಅನ್ಸಾರಿ ನನ್ನ ಸ್ಕೂಟರ್ ನ್ನು 2 ನೇ ಆರೋಪಿಗೆ ಕೊಡಿಸಿ, ನನ್ನನ್ನು ಆತನ ಸ್ಕೂಟರ್ ನಲ್ಲಿ ಮನೆಗೆ ಕರೆತಂದಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸ್ಕೂಟರ್ ನಂಬ್ರ ಈಗ ನೆನಪಿಲ್ಲ.

**<u>ಮರು ವಿಚಾರಣೆ - ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ